ಶ್ರೀ ಬಿ. ರಾಚಯ್ಯ.—ಹಿಂದೆ ಮಾಡಿದ್ದರಲ್ಲಿ ಏನು ಮಾಡಲಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—1953ನೇ ಇಸವಿ ನವೆಂಬರ್‌ನಲ್ಲಿ ತೆಗೆದ ಕೊಂಡಿರುವುದು. ಆಮೇಲೆ ಸರ್ಕಾರಿ ಆರ್ಡರ್ ಆಗಿರಬಹುದು.

ಶ್ರೀ ಬಿ. ರಾಚಯ್ಯ.—ಹಾಗಾದರೆ ರ್ಯಾಂಕ್ ಗೊತ್ತುಪಾಡುವುದರಲ್ಲಿ ಏನು ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಬರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—(ಬಿ) - ಭಾಗಕ್ಕೆ ಉತ್ತರವಾಗಿ 'Promotion are effected on the basis of seniority and merit in consultation with the Public Service Commission' ಎಂದು ತಿಳಿಸಿದ್ದೀರಿ, ಇದರಲ್ಲಿ ಸೀನಿಯಾರಿಟಿ ಹಾಳಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಸೀನಿಯಾರಿಟಿ ಹೋಗಿದೆ ಎಂದು ಮನವಿಗಳು ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದ ಹಾಗೆ ನೆನಪಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಸಿಸ್ಟೆಂಟ್ ಇಂಜನಿಯರಾಗಿ ನೇಮಕ ಮಾಡಿರುವವರನ್ನು ಕಫರ್ಮ್ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಡಿ. ದೇವರಾಜ ಅರಸ್. - ಕಫರ್ಮ್ ಮಾಡತಕ್ಕ ಕಾಲದಲ್ಲಿ ಈ ರೀತಿ ಸೀನಿಯಾರಿಟಿ ನಿರ್ಲಕ್ಷಿಸಿರುವ ಸಂದರ್ಭಗಳು ಬಂದರೆ ಅವುಗಳನ್ನು ಪುನಃ ಪರಿಶೀಲನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅನ್ಯಾಯವಾಗಿದೆ ಎಂದು ಸರ್ಕಾರಕ್ಕೆ ಗೊತ್ತಾದರೆ ಮಾಡುತ್ತೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಪ್ರಮೋಷನ್ ಕೊಟ್ಟಿರುವುದು ಸರ್ಕಾರದ ಹಕ್ಕುಮಿನ ಆಧಾರದ ಮೇಲಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಆ ರೀತಿ ಮಾಡಿರುವುದರಿಂದ ಅವರನ್ನು ಪ್ರೊಬೇಷನರ್ಸ್ ಎಂದು ಮಾತುವುದಕ್ಕೆ ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಮೋಷನ್‌ನನ್ನು ಡೈರೆಕ್ಟ್ ರಿಕ್ರೂಟ್‌ಮೆಂಟ್ ಎಂದು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರೊಬೇಷನರುಗಳನ್ನು ನೇಮಕಮಾಡುವು ಅವರ ಅವಶ್ಯಕತೆಯ ಆಧಾರದ ಮೇಲೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವರ ಅವಶ್ಯಕತೆಯ ಮೇಲಲ್ಲ, ಇಲಾಖೆಯ ಅವಶ್ಯಕತೆಯ ಮೇಲೆ ಮಾಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರ ಅವಶ್ಯಕತೆ ಎಂದರೆ ಇಲಾಖೆಯ ಅವಶ್ಯಕತೆ ಎಂದು ತಾನೇ?

ಅಧ್ಯಕ್ಷರು.—ಆಗಲೇ ಹೇಳಿದ್ದಾರೆ.

ಶ್ರೀ ಎ. ಆರ್. ನಾಯ್ಡು.—ಹಿಂದಿನ ಕಾಲದಲ್ಲಿ ಪರ್ಮನೆಂಟ್ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರುಗಳ ಹುದ್ದೆಗಳಿಗೆ ನೇಮಕ ಮಾಡುವಾಗ ಮಿಲಿಸ್ಟರುಗಳು ಅವರವರ ಅಳಿಯಂದಿರಿಗೆ ಮತ್ತು ಅಳಿಯಂದಿರಾಗುವವರಿಗೆ preference ಕೊಡುತ್ತಿದ್ದರು. ತಾವೂ ಅದೇ ನೀತಿಯನ್ನು ತಿಳಿದುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗಿನ ಸರ್ಕಾರದಲ್ಲಿ ಅಂಥಾದ್ದೇನೂ ಇಲ್ಲ; ನಮಗಾಗಿಗೂ ಅಂಥ ಅಳಿಯಂದಿರೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—1944ನೆಯ ಇಸವಿಯ ಸರ್ಕಾರೀ ಆಜ್ಞೆಯ ಪ್ರಕಾರ ಪ್ರೊಬೇಷನರುಗಳನ್ನು ಶೇಕಡ 50ಕ್ಕಿಂತ ಹೆಚ್ಚಾಗಿ ನೇಮಕ ಮಾಡಬಹುದೆ?

ಶ್ರೀ ಕಡಿದಾಳ್ ಮಂಜಪ್ಪ.—Not more than 50 per cent ಎಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಶೇಕಡ 75 ಕೂಡ ತೆಗೆದುಕೊಳ್ಳಬಹುದು.

Sri Kadidal MANJAPPA.—That depends upon the circumstances prevailing at a particular given time.

ಶ್ರೀ ಬಿ. ಹುಚ್ಚೇಗೌಡ.—ಈಗ ಶೇಕಡ 50ರಷ್ಟು ತೆಗೆದುಕೊಳ್ಳದಿರುವುದು ಸರ್ಕಾರದ ಕರ್ತವ್ಯ ಲೋಪವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಲೋಪವೆಂದು ಹೇಳುವುದಕ್ಕಾಗುವುದಿಲ್ಲ; ತೆಗೆದುಕೊಂಡಿಲ್ಲ.

Branch Canal at Peehalli.

Q.—319. Sri. K. PUTTASWAMY (Srirangapatna).—

Will the Government be pleased to state :—

(*a*) whether they have prepared estimates for feeding certain tanks from Visvesvaraya Canal by opening a Branch Channel at Peehalli of Srirangapatna Taluk ;

(*b*) whether it would not be possible to get this work completed during the present summer?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) May not be possible.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಮೊಬಲಗಿಗೆ ಅಂದಾಜಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—92,000 ರೂಪಾಯಿಗಳಿಗೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಸರ್ಕಾರದ ಮಂಜೂರಾತಿ ಆಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿದೆ ಎಂದು ನನ್ನ ನೆನಪು.

ಶ್ರೀ ಕೆ ಪುಟ್ಟಸ್ವಾಮಿ.—ಮಂಜೂರಾತಿಯಾಗಿದ್ದರೆ ಈ ಬೇಸಿಗೆಯಲ್ಲಾದರೂ ಕೆಲಸ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಣಕಾಸಿನ ಪರಿಸ್ಥಿತಿಯನ್ನವಲಂಬಿಸುತ್ತದೆ ಈ ಪ್ರಶ್ನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ಕೆರೆಗಳ ಕೆಳಗೆ ಎಷ್ಟೆಕರೆ ಜಮೀನಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರು ಕಾಂಟ್ರಿಬ್ಯೂಷನ್ ಕೊಡಬೇಕಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.